


International Journal of Kannada Research
www.kannadajournal.com

**ISSN: 2454–5813**
IJSR 2017; 3(1): 35-37
© 2017 IJKS
www.kannadajournal.com
Received: 08-11-2016
Accepted: 09-12-2016

**ಮೈತ್ರಿ ಭಟ್**
ಸಂಶೋಧನ ವಿದ್ಯಾರ್ಥಿ,
ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

**Correspondence**
**ಮೈತ್ರಿ ಭಟ್**
ಸಂಶೋಧನ ವಿದ್ಯಾರ್ಥಿ,
ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

# ವೈದೇಹಿಯವರ ಕಥನದಲ್ಲಿ ಮಹಿಳೆಯ ಮನಸಿನ ಅಭಿವ್ಯಕ್ತಿ

**ಮೈತ್ರಿ ಭಟ್**

ಸಾಹಿತ್ಯವು ಯಾವಾಗಲೂ ತನ್ನ ಸಮಕಾಲೀನ ಸಮಾಜದ ನೋವನ್ನು, ನಲಿವನ್ನು ಪ್ರತಿನಿಧಿಸುತ್ತಿರುತ್ತದೆ. ಸುಮಾರು ಅರ್ಧ ಶತಮಾನಗಳಷ್ಟು ಹಿಂದೆ ಪಯಣಿಸಿದರೆ ಆಗ ಮಹಿಳೆಯ ಸ್ಥಾನಮಾನ, ಸ್ವಾತಂತ್ರ್ಯ, ಅವಕಾಶ ಎಲ್ಲವೂ ನಾಲ್ಕು ಗೋಡೆಗಳಿಗೆ ಸೀಮಿತವಾಗಿತ್ತು. ಹಾಗಾಗಿ, ಆಗ ವಾಸ್ತವ ಬದುಕಿನಲ್ಲೇ ಸಿಗದ ಸ್ಥಾನ, ಸಾಹಿತ್ಯದಲ್ಲಿಯೂ ಸಿಗದೇ ಹೋದುದು ಸಹಜವಾಗಿದೆ. ನಾಲ್ಕು ಗೋಡೆಗಳ ನಡುವೆ ನಡೆಯುತ್ತಿದ್ದ ಪುರುಷನ ಬಯಕೆಗಳ ಬೆಂಕಿಗೆ ಬೇಯುತ್ತಿದ್ದ ಅವಳ ಗಂಟಲಿನಲ್ಲಿ ಪ್ರತಿಭಟನೆಯ ಕಾವು ಇರಲಿಲ್ಲ. ಅದು ಮಹಿಳಾ ಸಾಹಿತ್ಯದಲ್ಲಿ ಕೂಡಾ ಬಹಿರಂಗವಾಗುತ್ತಿರಲಿಲ್ಲ. ಆದರೆ ಈಗ ಮಹಿಳೆಯ ಜೀವನ ಶೈಲಿ, ಸ್ಥಾನಮಾನ ಎಲ್ಲವೂ ಮಾರ್ಪಾಟಾಗಿದೆ. ಬದಲಾವಣೆಯ ಕಾಲದಲ್ಲಿ ಎಲ್ಲವನ್ನು ಮೆಟ್ಟಿ ನಿಲ್ಲುವ ಎದೆಗಾರಿಕೆ ಮಹಿಳೆಯರದ್ದೂ ಆಗುತ್ತಿದೆ. ಹಿಂದಿನಂತೆ ಸ್ತ್ರೀಯರ ಶಿಕ್ಷಣ ಪುರುಷನ ನಿರ್ಧಾರಾತ್ಮಕ ಯೋಚನಾ ಕ್ರಮದಿಂದ ನಡೆಯದೆ, ಇಂದೀಗ ಸಿಗುತ್ತಿರುವ ಶಿಕ್ಷಣ, ಅವಕಾಶಗಳ ಪರಿಣಾಮ, ಮಹಿಳೆಯರನ್ನು ಕಾಡುತ್ತಿದ್ದ "ನಾನು ಕಲಿತು ಏನಾಗಬೇಕಾಗಿದೆ" ಎಂಬ ಮೂಲಭೂತ ಮನೋಭಾವ ನಾಶವಾಗಿ, ಇಂದಿನ ಆಧುನಿಕ ಮಹಿಳೆ ಶತಮಾನಗಳ ಕತ್ತಲೆಯ ಗವಿಯಿಂದ ಹೊರಬಂದಿದ್ದಾಳೆ. ಪರಿಣಾಮ, ಸ್ತ್ರೀಯು ತಾನು ಎದುರಿಸುತ್ತಿರುವ ಸಂಕೀರ್ಣ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ತೆರೆದಿಡುವಲ್ಲಿ ಯಶಸ್ವಿಯಾಗುತ್ತಿದ್ದಾಳೆ, ಹಾಗೂ ಮಹಿಳೆಯು ತಾನೂ ಸಾಹಿತ್ಯ ಲೋಕವನ್ನು ಪ್ರವೇಶಿಸಿ, ಮಹಿಳೆಯ ಬದುಕಿನ ಅನೇಕ ಒಳನೋಟಗಳನ್ನು ತನ್ನ ಕೃತಿಗಳಲ್ಲಿ ತೆರೆದಿಡುತ್ತಿದ್ದಾಳೆ. ತನ್ನದು ಅಡುಗೆ ಮನೆಯ ಸಾಹಿತ್ಯವಲ್ಲ, ತನ್ನ ಬದುಕಿನ ಹೇಳಲಾಗದ ಸತ್ಯಗಳನ್ನು ನಿರ್ಭಯವಾಗಿ ತಾನೂ ಬರವಣಿಗೆಯ ಮೂಲಕ ಹೊರಗೆಡಹಬಲ್ಲೆ ಎಂದು ಸಮರ್ಥವಾಗಿ ಸಾಬೀತುಗೊಳಿಸುತ್ತಿದ್ದಾಳೆ.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಇದೇನೂ ಹೊಸತಲ್ಲ. ವಚನಕಾರ್ತಿಯರಿಂದಲೇ ಕರ್ನಾಟಕದ ಪುರುಷಪ್ರಧಾನ ಸಮಾಜದಲ್ಲಿನ ಇಂತಹ ಕೆಲವು ಆಕ್ರಮಣಗಳನ್ನು ಪ್ರಶ್ನಿಸುವ ಪರಂಪರೆ ಕಂಡು ಬರುತ್ತದೆ. ನಂತರದಲ್ಲಿ ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ಬಂದ ಹೊಸದರಲ್ಲಿ ಬರೆದ ನಂಜನಗೂಡು ತಿರುಮಲಾಂಬಾ, ಆರ್. ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಬೆಳಗೆರೆ ಜಾನಕಮ್ಮ, ಗಿರಿಬಾಲೆ ಮೊದಲಾದವರು ತಮ್ಮ ಕೃತಿಗಳಲ್ಲಿ ಪಾರಂಪರಿಕ ಮಹಿಳಾ ಜೀವನದ ಸೀಮಾರೇಖೆಯನ್ನು ಹೊಸ ದಿಕ್ಕಿನಲ್ಲಿ ವಿಸ್ತರಿಸಿದ್ದಾರೆ. ಮುಂದಿನ ಬರಹಗಾರರಲ್ಲಿ ತ್ರಿವೇಣಿ, ಎಂ.ಕೆ. ಇಂದಿರಾ, ವಾಣಿ, ಅನುಪಮ ನಿರಂಜನ, ವೈದೇಹಿ, ಸಾರಾ ಅಬೂಬಕ್ಕರ್ ಇವರೆಲ್ಲರೂ ಇನ್ನಷ್ಟು ಪ್ರಗತಿಪರರಾಗಿ ಕಾಣುತ್ತಾರೆ. ಇವರ ಬರಹದಲ್ಲಿ ಮಹಿಳಾ ಸಂವೇದನೆ, ಅವಳ ದೇಹದ ಮೇಲೆ ಪುರುಷನು ಸಾಧಿಸುವ ಅಧಿಕಾರದ ಕರುಳು ಹಿಂಡುವ ಅನುಭವಗಳ ಅಭಿವ್ಯಕ್ತಿ ಹಿಂದಿಗಿಂತಲೂ ಹೆಚ್ಚು ಸರಿಯಾಗಿ ಅಂದರೆ ಹೊಸ ತಿಳುವಳಿಕೆಯ ನೆಲೆಯಲ್ಲಿ ಪ್ರಕಟವಾಗುತ್ತಿದೆ.

ಬಹಳ ವೇಗದಲ್ಲಿ ಬೆಳೆಯುತ್ತಿರುವ, ವಿವಿಧ ಪ್ರಕಾರಗಳಲ್ಲಿ ಮಿಂದೆದ್ದು, ಸ್ತ್ರೀಲೋಕ ಮರೆಯಲ್ಲಿಟ್ಟ ಅನೇಕ ಸೂಕ್ಷ್ಮಗಳನ್ನು ಲಹರಿಯಾಗಿ ಹರಿಸುತ್ತಿರುವ ವೈದೇಹಿ ಅವರು ನಾನೂ ಬರೆಯಬೇಕೆಂಬ ಆಸೆಯಿಂದ ಕಥಾಲೋಕಕ್ಕೆ ಪ್ರವೇಶಿಸಿದವರು. ಅವರಿಗೆ ಬರೆಯುತ್ತಾ ಹೋದಂತೆ ಬರವಣಿಗೆಯ ಆಸೆ, ಅರಿಯದಂತೆ ಪ್ರೀತಿಯ, ನೋವಿನ ಸೃಜನಶೀಲ ಕ್ರಿಯೆಯಾಯ್ತು. ಕನಸುಗಳನ್ನು ಹೆಣೆಯುವ ಅದಮ್ಯ ಬಯಕೆ, ಗೀಚಲು ಹವಣಿಸುವ ಉತ್ಸಾಹ, ಹೊಸತನ್ನು ಬೆರಗಿನೊಂದಿಗೆ ತನ್ನೊಳಗೆ ಬರಮಾಡಿಕೊಳ್ಳುವ ಪ್ರಾಮಾಣಿಕತೆ, ಮುಪ್ಪುರಿಗೊಂಡ ಕ್ರಿಯಾಶೀಲತೆಗಳಿಂದ ಒಡಗೂಡಿ ಬಲಗೊಂಡು ಆಳಕ್ಕಿಳಿಯುತ್ತಿರುವ ಬೇರುಗಳಲ್ಲಿ ಅವರೂ ಒಬ್ಬರಾಗಿದ್ದಾರೆ. ಕಾವ್ಯವನ್ನು ಹೊಸ ದೃಷ್ಟಿಕೋನದಲ್ಲಿ ನೋಡಿ, ಅನೇಕ ತಿರುವುಗಳನ್ನು ತೆರೆದಿಟ್ಟು ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಮಕ್ಕಳ ಕಥೆಯಲ್ಲೂ ಸೈ ಎನಿಸಿಕೊಂಡು,

ಪ್ರಾದೇಶಿಕ ಭಾಷೆಯಲ್ಲಿಯೇ ಕಥೆ ಹೇಳಿ ಓದುಗರೆದೆಯನ್ನು ತಟ್ಟಿದ್ದಾರೆ.

ವಸಾಹತೋತ್ತರ ಕಾಲದ ಬ್ರಾಹ್ಮಣ ಸಮಾಜದ ಬಿಕ್ಕಟ್ಟುಗಳು, ಅವುಗಳ ಸಂಕೀರ್ಣತೆ, ಕೌಟುಂಬಿಕ ತಲ್ಲಣಗಳ ರೂಪಗಳೇ ವೈದೇಹಿಯವರ ಕಥನಗಳ ಮೂಲ ಜೀವಾಳವಾಗಿದೆ. ಕುಟುಂಬದಲ್ಲಿ ಹೆಣ್ಣಿನ ಅನನ್ಯತೆಯನ್ನು ಬಿಂಬಿಸುವಾಗ ಅದಕ್ಕೊಂದು ಪ್ರಾದೇಶಿಕ ಹಾಗೂ ಕಾಲದ ಆವರಣವನ್ನು ಅವರು ನೀಡುತ್ತಾರೆ. ಕುಂದಾಪುರದ ಪರಿಸರ, ಸ್ವಾತಂತ್ರ್ಯ, ಅನಂತರದ ಕಾಲಘಟ್ಟದಲ್ಲಿ ಕುಟುಂಬದ ಛಿದ್ರೀಕರಣ ಮತ್ತು ಅವುಗಳಲ್ಲಿ ಸಿಕ್ಕು ನಲುಗುವ ಹೆಂಗಸರು ಇವರ ಕಥೆಗಳಲ್ಲಿ ಎದ್ದು ಕಾಣುವ ಅಂಶಗಳಾಗಿವೆ. ಕಥೆಗಳಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಾ, ಬಂಡಾಯದ ಆಶಯಗಳನ್ನು ಹುಟ್ಟು ಹಾಕುತ್ತಾ, ಕಲಾತ್ಮಕವಾಗಿ ಅರಳುವ ಬದುಕಿನ ಅನೇಕ ನೋವು ನಲಿವಿನ ಸಂಗತಿಗಳು ಶೋಷಣೆಯ ವಿವಿಧ ಮುಖಗಳು, ಮೌಢ್ಯದ ವಿವರಗಳು ಹೇರಳವಾಗಿವೆ. ಮಹಿಳೆಯ ಕನಸು, ಅಪೇಕ್ಷೆ, ಬದುಕಿನ ಗುರಿ ಹಾಗೂ ಜೀವನ ಧೋರಣೆಗಳಲ್ಲಿ ಆದ ಮತ್ತು ಆಗುತ್ತಿರುವ ಪಲ್ಲಟಗಳು ಎಳೆ ಎಳೆಯಾಗಿ ಇವರ ಕಥನ ಸಾಹಿತ್ಯದಲ್ಲಿ ಅನಾವರಣವಾಗಿದೆ. ಅಲ್ಲದೆ, ವ್ಯಕ್ತಿತ್ವ, ಮಾನಸಿಕ ತಲ್ಲಣಗಳಂತಹ ಅಂತಃಕೇಂದ್ರೀಯ ನೆಲೆಗಳೇ ವಸ್ತುವಾಗಿವೆ.

ವೈದೇಹಿಯವರ ಅನೇಕ ಕಥೆಗಳಿಗೆ ಮಹಿಳೆಯರ ಅಂತರಂಗವೇ ಕೇಂದ್ರಬಿಂದುವಾಗಿದೆ. ಹದಿಹರೆಯದ ಬಾಲೆ ಬೀನ(ಚಂದಲೆ)ಳಿಂದ ಹಿಡಿದು ಮುದುಕಿ ಮಂದಕ್ಕಳ(ಸೌಗಂಧಿಯ ಸ್ವಗತಗಳು) ತನಕ ವಿವಿಧ ವಯಸ್ಸಿನ ಸ್ತ್ರೀಯರು ಇವರ ಕತೆಗಳಲ್ಲಿ ಬರುತ್ತಾರೆ. ಬಡತನ, ಶ್ರೀಮಂತಿಕೆ, ವಿವಾಹಿತ ಸ್ಥಿತಿ, ಅವಿವಾಹಿತ ಸ್ಥಿತಿ, ವೈಧವ್ಯ....... ಈ ಎಲ್ಲ ಸ್ಥಿತಿಗಳನ್ನು ಮೀರಿ ಹರಿಯುವ ಮಹಿಳಾ ಸಮಸ್ಯೆಗಳ ಕುರಿತು ಅವರು ಬೆಳಕು ಚೆಲ್ಲಿದ್ದಾರೆ. ಕಥಾನಾಯಕಿಯರು ಎತ್ತರದ ವೇದಿಕೆಯಲ್ಲಿ ನಿಂತು, ಕಿರುಚಾಡಿ ಘೋಷಣೆ ಕೂಗುವ ಮೂಲಕ ಪ್ರಶ್ನೆಗಳನ್ನು ಕೇಳದಿದ್ದರೂ, ತಮ್ಮನ್ನು ತಾವೇ ಆಳವಾಗಿ ಪ್ರಶ್ನಿಸಿಕೊಳ್ಳುವ ಮೂಲಕ ತಮ್ಮ ಹುಡುಕಾಟದ ಹಂದರದಲ್ಲಿ ಓದುಗರನ್ನೂ ಸೆಳೆದುಕೊಳ್ಳುತ್ತಾರೆ. ಅವರ ಅನೇಕ ಕತೆಗಳಿಗೆ ಸ್ವಗತದ ಶೈಲಿಯೇ ಓದುಗರನ್ನು ವಿಚಾರಕ್ಕೆ ಹಚ್ಚುತ್ತದೆ.

ಒಂದೇ ವಿಚಾರದ ಬಗೆಗೆ ಮಹಿಳೆಯರೇ ಭಿನ್ನವಾಗಿ ಅಭಿವ್ಯಕ್ತಿಸಿರುವ ಮಾದರಿಗಳನ್ನು ಇವರ ಕಥನದಲ್ಲಿ ಗುರುತಿಸಬಹುದು. 'ಅಂತರಂಗದ ಪುಟಗಳು', 'ಚಿಪ್ಪು', 'ಬೀಳು–ಬೇರು' ಕಥೆಯ ನಾಯಕಿಯರಿಂದ ಮದುವೆಯ ಸಾರ್ಥಕತೆಯ ಬಗೆಗಿನ ಪ್ರಶ್ನೆಗಳು ಮತ್ತೆ ಮತ್ತೆ ಪ್ರಶ್ನಿಸಲ್ಪಡುತ್ತವೆ.

ಮದುವೆಯನ್ನಷ್ಟೆ ಅಲ್ಲ, ತಾಯ್ತನ ಮತ್ತು ತಾಯಿ–ಮಕ್ಕಳ ಸಂಬಂಧವನ್ನೂ ಕೂಡಾ ಇಲ್ಲಿನ ನಾಯಕಿಯರು ಪ್ರಶ್ನಿಸುತ್ತಾರೆ. ಉದಾ: 'ಮರಗಿಡಬಳ್ಳಿ'

ಇವರ ಕಥೆಗಳಲ್ಲಿ ಪಾತ್ರಗಳಿಗೆ ನೀತಿ ಅನೀತಿಯ ಪ್ರಶ್ನೆಗಿಂತ ಜೀವಂತವಾಗಿ ಬದುಕುವುದೇ ಮುಖ್ಯವಾಗುತ್ತದೆ. ಈ ಹೆಂಗಸರು ಹಾದಿ ತಪ್ಪಿದವರಲ್ಲ, ಆದರೆ, ದೈನಂದಿನ ಬದುಕಿನ ಲಯ, ಬಂಧನ, ಅಸ್ತಿತ್ವವಿಲ್ಲದ ಜೀವನದ ಹಾಸು ಬೀಸುಗಳಿಂದ ರೋಸಿ ಹೋಗಿ ಈ ರೀತಿಯ ಯೋಚನೆಗಳಲ್ಲಿ ತೊಡಗಿದವರು. ಅವರಿಗೆ ಜೀವಂತವಾಗಿ ಬದುಕುವುದೇ ಮುಖ್ಯವಾಗುತ್ತದೆ. ಇವು ಮಹಿಳಾ ಅಭಿವ್ಯಕ್ತಿಯ ಉಜ್ವಲ ಉದಾಹರಣೆಗಳಾಗಿ ನಳನಳಿಸುತ್ತವೆ.

ಅವರ 'ಅಸ್ಪೃಶ್ಯರು' ಕಾದಂಬರಿಯಲ್ಲಿ ಹೆಣ್ಣು ಬೌದ್ಧಿಕ ಹಾಗೂ ಜೈವಿಕ ನೆಲೆಯ ಅಸ್ಪೃಶ್ಯತೆಯನ್ನು ಅನುಭವಿಸುತ್ತಾಳೆ. ಅಲ್ಲಿ ಆಧುನಿಕತೆಯನ್ನು ಒಪ್ಪಿಕೊಂಡ ಹಾಗೂ ಸಂಪ್ರದಾಯವನ್ನು ಒಪ್ಪಿಕೊಂಡ ಪಾತ್ರಗಳ ನಡುವೆ ಸಂಘರ್ಷವನ್ನು ಗುರುತಿಸಬಹುದು. ಹೆಣ್ಣು ಅಪೇಕ್ಷಿಸುವ ಜೀವನದ ಕುರಿತ ವಿವರಗಳು, ಹೆಣ್ಣು ಯಾವುದೇ ನಿರ್ಧಾರ ತೆಗೆದುಕೊಳ್ಳಲು ಯೋಗ್ಯಳಲ್ಲ ಎಂದು ಆಕೆಯನ್ನು ಹೊರಗಿಡುವುದು, ಹೆಣ್ಣಿನ ಸ್ಥಾನಮಾನವನ್ನು ಪ್ರಶ್ನಿಸುವ, ವಿಮರ್ಶಿಸುವ ಕಾಳಜಿ, ಗಂಡಿನ ಏಕಸ್ವಾಮ್ಯವನ್ನು ಒಪ್ಪಿಕೊಂಡ ಪಾತ್ರಗಳು ಅಂದರೆ, ಹೆಣ್ಣು ಗಂಡು ಹೇಳಿದಂತೆ ಮನೆಯೊಳಗೆ ಇದ್ದು, ಅವನನ್ನು ತೃಪ್ತಿಪಡಿಸಿ ಮೌನ ದನಿಯಾಗುವ ಪಾತ್ರಗಳನ್ನು ಕಾಣಬಹುದಾಗಿದೆ. ಹಿರಿಯ ಪಾತ್ರಗಳು ಹಳೆಯ ಸಂಪ್ರದಾಯಕ್ಕೆ ಒಗ್ಗಿಕೊಂಡರೆ, ಕಿರಿಯ ಪಾತ್ರಗಳು ಹೊಸ ಸಂವೇದನೆಯ ಅಲೆಗಳನ್ನು ಪ್ರಕಟಪಡಿಸುತ್ತವೆ.

ಅವರ ಕಥೆಗಳಲ್ಲಿ ಮಹಿಳೆಯ ಅಂತರಂಗದಲ್ಲಿ ಒಡಮೂಡುವ ಪ್ರಶ್ನೆಗಳು, ತಾಕಲಾಟಗಳು, ಅವು ಅಪ್ಪಳಿಸುವ ರೀತಿ, ಅದರ ಪರಿಣಾಮ ಇವೆಲ್ಲವನ್ನೂ ತೆರೆದಿಡುವ ಪ್ರಯತ್ನವಿದೆ. ಹೇಗೆ ಸಮುದ್ರದ ಅಲೆಗಳು ತಮ್ಮ ಅಂತರಂಗದಲ್ಲಿ ಹುದುಗಿದ್ದ ಚಿಪ್ಪು, ಕಸ ಪ್ರತಿಯೊಂದನ್ನೂ ದಡಕ್ಕೆ ತಂದೆಸೆಯುತ್ತದೆಯೋ ಹಾಗೆಯೇ, ಹೆಣ್ಣಿನ ಅಂತರಂಗದಲ್ಲಿ ಅದುವರೆಗೆ ಬಚ್ಚಿಟ್ಟ ಮನಸ್ಸಿನ ತಾಕಲಾಟ, ಒಳತುಡಿತ, ಸಂವೇದನೆ, ಧುಮ್ಮಿಕ್ಕ ಹೊರಟ ಒಳದುಗುಡದ ಅಳುಕು, ಗೊಂದಲಗಳು, ಕಿಟಕಿಯ ಮೂಲಕ ದಿಕ್ಕಿನತ್ತ ದೃಷ್ಟಿ ಹಾಯಿಸುವ ನೋಟ, ನೋವು–ನಲಿವು ಅಂತರಂಗದಾಳದಿಂದ ಅಲೆ ಅಲೆಯಾಗಿ ಒಡಮೂಡಿದೆ. ಮೌನದೆದುರು ಮಾತುಗಳು ಕುಸಿಯುವ ಹಾಗೂ ಕತ್ತಲಿದ್ದುದು ಹೊರಗಲ್ಲ ಒಳಗೆ ಎಂಬುದರ ಅರಿವಿನ ಸೂಚನೆಗಳಿವೆ. ಒಮ್ಮೆ ಎದ್ದ ಅಲೆ ಯಾವತ್ತೂ ದಡ ಸಿಕ್ಕುವವರೆಗೂ ವಿಸ್ತರಿಸುತ್ತಲೇ ಹೋಗುತ್ತದೆ ಎಂದೂ ಹಿಂದೆ ಮರಳುವುದಿಲ್ಲ. ಹಾಗೆಯೇ, ಮಹಿಳೆಯು ಮೆಲ್ಲನೆ ಎದ್ದು, ಮೆಟ್ಟಿಲಿಳಿದು, ಅಂಗಳದಾಟಿ ಹೊರಟ ಸೂಚನೆಗಳಿವೆ.

ಹೊಸ ಸಮಾಜಕ್ಕೆ ತನ್ನನ್ನು ತೆರೆದುಕೊಂಡ ಮಹಿಳೆಯ ಅಭಿವ್ಯಕ್ತಿ ಬೆಳೆಯುತ್ತಾ ಸಾಗಿದ ಪರಿಯನ್ನು ವೈದೇಹಿ ಅವರು ಗುರುತಿಸಿದ್ದನ್ನು ಅವರ ಕಥೆಗಳ ಸಾಲುಗಳ ಮೂಲಕ ನಾವು ಹೀಗೆ ಗ್ರಹಿಸಬಹುದು: "ದಾರಿಯೇನೂ ಅವಳಿಗೆ ಹೊಸದಲ್ಲ, ಅಲ್ಲಿರುವ ಮನೆಗಳೂ. ಆದರೆ ಅದರೊಳಗಿರುವವರಿಗೆ ಮಾತ್ರ ಅವಳ ಗುರುತಿಲ್ಲ. ಹೀಗಿರುವಾಗ, ಗಗನದಲೊಂದು ಎಳೆಬೆಳಕು ಬೆಚ್ಚನೆ ಹರಡಿತು. ಘಮಘಮದ ಭಾವಗಳ ಮೃದು ಹೆಜ್ಜೆಗಳೆಲ್ಲ ಧೂಳು ಹಾರಿಸಿ ಮುಚ್ಚಿ ಅಂತರಂಗದ ಆಳಕ್ಕೆ ತಳ್ಳಿ ಬಚ್ಚಿಟ್ಟುಕೊಂಡ ಬಯಲು. ಅಲ್ಲಿ ನಡೆಯುತ್ತಿದೆ ಹಾಡುತ್ತಿದ್ದ ಕೋಗಿಲೆಯು ಎತ್ತ ಹಾರಿತೆಂಬ ಹುಡುಕಾಟ. ಅದೂ ಗಾಳಿಯಲ್ಲಿ, ಚಿಗುರಿನಲ್ಲಿ, ಬಯಲಿನಲ್ಲಿ, ದನಿಯಲ್ಲಿ, ಹಾಡಿನಲ್ಲಿ. ಜೊತೆಗೆ ಶತಮಾನಗಳಿಂದ ಕದಲದೇ ನಿಂತ ಬಂಡೆಗಳಿಗಾದರೂ ಅವು ಹೀರಲಿ, ಬಿಡಲಿ ಒಮ್ಮೆ ಒಳಗಿನದನ್ನು ಹೇಳಿ ಹೇಳಿಯೇ ಖಾಲಿ ಮಾಡಿಕೊಳ್ಳಬೇಕು ಎಂಬಷ್ಟು ಹೊರೆಯಿತ್ತು. ಹಾಗಾಗಿ, ಸತ್ತವರನ್ನೆಲ್ಲ ರಾತ್ರಿ ಹೊತ್ತು ನಕ್ಷತ್ರಗಳನ್ನಾಗಿ ಮೆರೆಸುತ್ತ ಹಗಲಿನಲ್ಲಿ ನೀಲಿಗಟ್ಟಿದ ಹೊದಿಕೆಯೊಳಗೆ ಮುಚ್ಚಿಡುವ ಅಂತರಿಕ್ಷದ ಕೆಳಗಿನ ನಡಿಗೆ ಮುಂದುವರಿಯುತ್ತಲೇ ಸಾಗಿದೆ. ಹೀಗೆ ಅರ್ಥವಾಗದ ಅರ್ಥವ ಬಿಚ್ಚಿಡುತ್ತ, ಗುಲಾಬಿ ಮೃದು ಪಾದಗಳ ಹೆಜ್ಜೆ ಮೂಡಿಸಿದ, ಮೂಡಿಸುತ್ತಿರುವ ಲೋಕ ಇಲ್ಲಿದೆ."

ಇದನ್ನು ಅವರ ಕಥೆಗಳ ಶೀರ್ಷಿಕೆಗಳಲ್ಲೂ ನಾವು ಕಾಣಬಹುದು: 'ಬೆದಕಾಟದ ಬದುಕೆಲ್ಲ, ಮದುವೆ ಹೆಣ್ಣು ಸೀರೆ, ಚಿಪ್ಪು, ಕೊಳ, ಬೀಳು ಬೇರು, ಗೂಡಿನೊಳಗೆ ಒಂದು ಹಕ್ಕಿ, ಸಪ್ಪಳ ಮಾಡದ ಹೆಜ್ಜೆಗಳು, ಆತ, ಅವಲಂಬಿತರು, ಗುಲಾಬಿ ಮೃದು ಪಾದಗಳು, ಅಂತರಂಗದ ಪುಟಗಳು, ಅಂತರಾಳದ ಬದುಕು, ಕತ್ತಲೆಯ ಮಾತು, ಖಾಲಿ ಗೋಡೆ, ಒಂದು ಬಾಗಿಲ ಸದ್ದು, ಪ್ರಶ್ನೆ, ಒಗಟು, ಅವರವರ ಭಾವಕ್ಕೆ, ತೆರೆಯದ ಪುಟಗಳು, ಕ್ರೌಂಚ ಪಕ್ಷಿಗಳು'. ಈ ಪದಗಳನ್ನು ಸರಿಯಾಗಿ ಗಮನಿಸಿದರೆ ಮೊದಲು ಅಡುಗೆ ಮನೆಯೊಳಗೆ ತನ್ನ ಪ್ರಪಂಚವನ್ನು ಕಂಡುಕೊಂಡಿದ್ದ ಹೆಣ್ಣು

ನಿಧಾನವಾಗಿ ಅಲ್ಲಿಂದ ಹೊರಬಂದು ತನ್ನ ಅಂತರಂಗದ ಮಾತಿಗೆ ದನಿಯಾದ ಆದರೂ ತನ್ನ ಮನಸನ್ನು ತೆರೆದಿಡಲಾಗದ ಅಸಹಾಯಕತೆ ಹಾಗೂ ಕೊನೆಗೆ ಗಂಡು – ಹೆಣ್ಣು ಜೀವನದ ಬಂಡಿ ಸಾಗಲು ಹಾಗೂ ತನ್ನ ಪೀಳಿಗೆಯನ್ನು ಮುನ್ನಡೆಸಲು ಅನಿವಾರ್ಯ ಎಂಬುದನ್ನು ಅರ್ಥೈಸಿಕೊಂಡಿರುವುದನ್ನು ಸೂಚಿಸುತ್ತದೆ.

ಮಹಿಳಾ ಜಗತ್ತನ್ನು ಪುರುಷ ನೋಟವು ಕ್ಷುಲ್ಲಕ, ಭಾವುಕ, ತರ್ಕಹೀನ ಎಂದು ನೋಡಿದರೂ, ವೈದೇಹಿ ಅವರು ಜಗತ್ತನ್ನು ಮಹಿಳೆಯ ಕಣ್ಣಿನಿಂದಲೇ ನೋಡುತ್ತಾರೆ. ಹಾಗಾಗಿ ಅವರಿಗೆ ಪುರುಷ ದೃಷ್ಟಿಗೆ ನಿಲುಕಲಾರದ ಅನೇಕ ಸಂಗತಿಗಳು ಗೋಚರವಾಗುತ್ತವೆ. ಅವರ ಕಥನವು ಅಡುಗೆ ಮನೆಯಿಂದ ಹೊರಟು, ಮಹಿಳೆಯ ಜಗತ್ತಿನಲ್ಲೆಲ್ಲ ಸುತ್ತಾಡಿ ಅವಳ ಅಂತರಂಗದ ಅಭಿವ್ಯಕ್ತಿಯನ್ನು ನಮ್ಮ ಮುಂದೆ ತೆರೆದಿಡುತ್ತವೆ.

**ಪರಾಮರ್ಶನ ಗ್ರಂಥಗಳು**

1. ಮೀರಾ, ಎಲ್. ಜಿ. (೨೦೦೪). ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ (ಪ್ರಥಮ ಮುದ್ರಣ). ಬೆಂಗಳೂರು: ಶಕ್ತಿ ಪ್ರಿಂಟರ್ಸ್ ಆಂಡ್ ಪಬ್ಲಿಷರ್ಸ್.
2. ಅಲೆಗಳಲ್ಲಿ ಅಂತರಂಗ – ವೈದೇಹಿ ಅವರ ಸಮಗ್ರ ಕಥಾ ಸಂಕಲನ
3. ಅಸ್ಪೃಶ್ಯರು – ಕಾದಂಬರಿ: ವೈದೇಹಿ.